WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15ನೇ ಎಪ್ರಿಲ್ 2008
॥ ಧಿಯೋ ಯೋನಃ ಪ್ರಚೋದಯಾತ್ ॥
Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-8 ಸಂಚಿಕೆ-4 ಪುಟಗಳು-12 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಬ್ರಹ್ಮಕಲಶೋತ್ಸವಕ್ಕೆ ಸಜ್ಜಾದ ಉದಯಾದ್ರಿ ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನ




ಪ್ರತಿಷ್ಠೆಗೊಳ್ಳಲಿರುವ ಬಾಲಗಣಪತಿ ಹಾಗೂ ಪ್ರಸನ್ನ ಪಾರ್ವತಿಯ ಬಿಂಬ ಮೂರ್ತಿಗಳು

ಉಡುಪಿ ಜಿಲ್ಲಾ ಪಡುಬಿದ್ರಿಯ ಶ್ರೀಕ್ಷೇತ್ರ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಅಮ್ಮನವರ ಜೀರ್ಣಗೊಂಡ ದೇವಾಲಯವನ್ನು ಪುನರ್‌ನಿರ್ಮಾಣಗೊಳಿಸುವ ಬೃಹತ್ ಕಾರ್ಯವನ್ನು ಭಕ್ತ ಬಾಂಧವರು ಕೈಗೊಂಡಿರುವರು. ಈಗಾಗಲೇ ಬಾಲಗಣಪತಿಯ ಅಷ್ಟಕೋನಾಕೃತಿಯ ಉತ್ತರಾಭಿಮುಖದ ಶಿಲಾಮಯ ಗರ್ಭಗುಡಿ ಶಿಲಾಮಯ ತೀರ್ಥಮಂಟಪವು ಅತ್ಯಂತ ಸುಂದರವಾಗಿ ನಿರ್ಮಾಣಗೊಂಡಿವೆ. ಉಳಿದಿರುವ ಸುತ್ತು ಪೌಳಿ, ಬಾವಿ, ತುಳಸಿಕಟ್ಟೆ, ಒಳಾಂಗಣಕ್ಕೆ ಶಿಲಾಹೊದಿಕೆ, ಶ್ರೀಪ್ರಸನ್ನ ಪಾರ್ವತಿ ಅಮ್ಮನವರ ಮತ್ತು ಪರಿವಾರ ದೇವತೆಗಳ ಗುಡಿಗಳು ತ್ವರಿತದಿಂದ ಆಗುತ್ತಿವೆ. ಶೃಂಗೇರಿ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಆಶೀರ್ವಾದದಿಂದ ಮತ್ತು ವೇದಮೂರ್ತಿ ಪಾವಂಜೆ ಶ್ರೀ ವಾಗೀಶ ಶಾಸ್ತ್ರಿ ತಂತ್ರಿಗಳ ನೇತೃತ್ವದಲ್ಲಿ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಎಪ್ರಿಲ್ 24ರಿಂದ ಮೇ 1ರ ತನಕ ನಡೆಯಲಿರುವುದು.

ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಚಂದಗಾಣಿಸುವರೇ ನಿಮ್ಮೆಲ್ಲರ ಸಹಕಾರಗಳನ್ನು ಕೋರುತ್ತಾ ಈ ಮಹೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಕ್ರಮಗಳ ವಿವರ ಒಳಗಿನ ಪುಟದಲ್ಲಿ......

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತ್ಯುತ್ಸವ





2004ನೇ ಇಸವಿಯಲ್ಲಿ ನವೀಕರಣಗೊಂಡು ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠಾಧೀಶ್ವರ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದಿವ್ಯ ಹಸ್ತದಿಂದ ಶ್ರೀ ಮಹಾಗಣಪತಿ ಶ್ರೀ ಶಾರದಾಪರಮೇಶ್ವರಿ ಮತ್ತು ಆದಿಶಂಕರರ ದಿವ್ಯ ವಿಗ್ರಹಗಳ ಪುನಃಪ್ರತಿಷ್ಠೆ, ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮಗಳು ಸಂಪನ್ನಗೊಂಡ ವೈಭವದ ಕ್ಷಣಗಳ ನೆನಪು ಮನದಲ್ಲಿ ಇನ್ನೂ ಹಸಿರಾಗಿದೆ. ಆ ಕ್ಷಣಗಳ ನೆನಪು ಮರುಕಳಿಸಿ ಮನಸ್ಸು ಪುಳಕಗೊಳ್ಳುವುದಕ್ಕೆ ಪ್ರತೀ ವರ್ಷ ನಡೆಯುವ ಪ್ರತಿಷ್ಠಾ ವರ್ಧಂತ್ಯುತ್ಸವ ಅವಕಾಶ ಮಾಡಿಕೊಡುತ್ತದೆ. ನಮ್ಮ ಸಮಾಜ ಬಾಂಧವರೊಂದಿಗೆ ಕುಂಜಿಬೆಟ್ಟಿನ ಪರಿಸರದ ಭಕ್ತಾಧಿಗಳಿಗೆ, ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಮತ್ತು ಮಹಿಳೆಯರಿಗೆ ಹೆಚ್ಚು ಪ್ರಿಯರಾಗಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ಶಾರದಾಪರಮೇಶ್ವರಿಯ ಪ್ರತಿಷ್ಠಾ ವರ್ಧಂತ್ಯುತ್ಸವದಂದು ಪರಿಸರದ ಭಕ್ತಾಧಿಗಳು ಭಾಗವಹಿಸುತ್ತಾರೆ.

ಈ ವರ್ಷ ಪ್ರತಿಷ್ಠಾ ವರ್ಧಂತ್ಯುತ್ಸವವು ಮಾರ್ಚ್ ತಿಂಗಳ 14ರಂದು ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ನಡೆಯಿತು. ಬೆಳಿಗ್ಗೆ ಪ್ರಾರ್ಥನೆ, ಸಂಕಲ್ಪದೊಂದಿಗೆ ಆರಂಭವಾಗಿ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರ ಪೂಜೆಗಳೊಂದಿಗೆ ಸಾಗಿ ಮಧ್ಯಾಹ್ನ ಮಹಾಪೂಜೆ ನಡೆಯಿತು. ಪ್ರಸಾದ ವಿತರಣೆಯ ನಂತರ ಬ್ರಾಹ್ಮಣ, ಸುಹಾಸಿನಿ ಆರಾಧನೆ ನೆರವೇರಿತು. ತನ್ಮಧ್ಯೆ ಲಲಿತಾ ಸಹಸ್ರನಾಮ ಪಾರಾಯಣ, ರುದ್ರ ಪಾರಾಯಣಗಳು ನಡೆದವು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮತ್ತು ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮಿತಿ ಮಂಗಳೂರು ದ.ಕ.

### ವಿನಂತಿ



ಓಂ ಶ್ರೀ ಗುರುಭ್ಯೋ ನಮಃ

ಸಜ್ಜನ ಬಂಧುಗಳೇ,

ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು ನೂರು ವರ್ಷಗಳನ್ನು ಪೂರೈಸಿ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ 2008ನೇ ಇಸವಿಯ ಮೇ ತಿಂಗಳ ದಿನಾಂಕ : 11 ರಿಂದ 13ರ ತನಕ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ನಮ್ಮ ಸಂಘಕ್ಕೆ ಚಿತ್ತೈಸಲಿರುವರು.

ಈ ಸಂದರ್ಭದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಬ್ರಾಹ್ಮಣಸಮಾವೇಶ ನಡೆಯಲಿದ್ದು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿ

2008ನೇ ಮೇ ತಿಂಗಳ 11,12,13ನೇ ದಿನಾಂಕಗಳಂದು ಸಮಾಜ ಬಾಂಧವರು ತಮ್ಮ ಮನೆಗಳಲ್ಲಿ ಯಾವುದೇ ಸಮಾರಂಭಗಳನ್ನು ಇಟ್ಟುಕೊಳ್ಳದೆ, ಭಾಗವಹಿಸುವಂತೆಯೂ, ಶತಮಾನೋತ್ಸವ ಸಮಾರಂಭವು ''ನ ಭೂತೋ ನ ಭವಿಷ್ಯತಿ''ಯಾಗಿ ಜರಗಲು ತನು-ಮನ-ಧನಗಳಿಂದ ತಮ್ಮ ಸಂಪೂರ್ಣ ಸಹಕಾರಗಳನ್ನು ನೀಡಿ ಈ ಮಹತ್ಕಾರ್ಯವು ಯಶಸ್ವಿಯಾಗಿ ಜರಗಿ ಸಮಾಜದ ಐಕ್ಯತೆಯು ಮೆರೆಯುವಂತೆ ಸಹಕರಿಸಬೇಕಾಗಿ ವಿನಂತಿ.

''ಸಂಘೇ ಶಕ್ತಿ ಕಲಿಯುಗೇ ಸಂಘಂ ಶರಣಂ ಗಚ್ಛಾಮಿ''

**ಎನ್. ಕೆ. ಜಗನ್ನಿವಾಸ ರಾವ್**
ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ)

**ಎನ್. ವಾಸುದೇವ ರಾವ್**
ಅಧ್ಯಕ್ಷರು, ಶತಮಾನೋತ್ಸವ ಸಮಿತಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ)

**ಕರುಣಾಕರ ಬೆಳ್ಳೆ**
ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ)

**ಡಾ। ಎ. ಪಿ. ಕೃಷ್ಣ**
ಕಾರ್ಯದರ್ಶಿ, ಶತಮಾನೋತ್ಸವ ಸಮಿತಿ, ಶ್ರೀ ಸುಬ್ರಹ್ಮಣ್ಯ ಸಭಾ (ರಿ)